
# ಪ್ರಾತಃಸ್ಮರಣ ಸ್ತೋತ್ರಗಳು

**ಡಾ. ಕೆ.ಎಲ್. ಪ್ರಸನ್ನಾಕ್ಷೀ**



ಹಿಂದೂ ಜೀವನ ಪದ್ಧತಿಯಲ್ಲಿ ಸ್ತೋತ್ರ ಸಾಹಿತ್ಯವು ಜೀವನದ ಅವಿಭಾಜ್ಯ ಅಂಗ. ಅದರಲ್ಲಿ ಬೆಳಗಿನ ಹೊತ್ತು ಹೇಳಿಕೊಳ್ಳುವ ಸ್ತೋತ್ರಗಳು ಪ್ರತಿ ದಿನದ ನಡವಳಿಕೆಯನ್ನು ಆಧ್ಯಾತ್ಮಿಕ ಭಾವದತ್ತ ಕರೆದೊಯ್ಯುವಲ್ಲಿ ವಿಶೇಷ ಮಹತ್ವವನ್ನು ಪಡೆದಿವೆ. ಈ ಕುರಿತು ಇಲ್ಲಿ ವಿವರಿಸಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

## ಪೀಠಿಕೆ

ಪ್ರಾರಬ್ಧ್ ಪಹಲೇ ರಚಾ ಪೀಛೇ ರಚಾ ಸರೀರ್ ।
ತುಲಸೀ ಚಿಂತಾ ಕ್ಯೋಂ ಕರೇ, ಭಜಲೇ ಶ್ರೀ ರಘುಬೀರ್ ॥

ಪ್ರಾರಬ್ಧ ಸಿದ್ಧವಾದ ಮೇಲೆ ಅದಕ್ಕೆ ಅನುಗುಣವಾಗಿ ಶರೀರ ದೊರಕುತ್ತದೆ. 'ಪ್ರಾರಬ್ಧವನ್ನು ಕುರಿತು, ಶರೀರವನ್ನು ಕುರಿತು ಯಾಕೆ ಯೋಚನೆ ಮಾಡ್ತೀಯಾ? ಭಗವಂತನ ನಾಮ ಸ್ಮರಿಸು ಅದು ಈ ಎಲ್ಲ ಬಾಧೆಯನ್ನೂ ದೂರಮಾಡುತ್ತದೆ' ಎನ್ನುತ್ತಾರೆ ಶ್ರೀ ಗೋಸ್ವಾಮಿ ತುಲಸೀದಾಸರು. ಪತಂಜಲಿಗಳೂ ಕೂಡ ತಮ್ಮ ಯೋಗಸೂತ್ರದಲ್ಲಿ 'ಹಿಂದಿನ ಹಾಗೂ ಈಗಿನ ಜನ್ಮಗಳಲ್ಲಿ ಮಾಡಿರುವ, ಮಾಡುತ್ತಿರುವ ಒಳ್ಳೆಯ ಹಾಗೂ ಕೆಟ್ಟ ಕೆಲಸದ ಪರಿಣಾಮವಾಗಿ ಪುಣ್ಯ-ಅಪುಣ್ಯ ಫಲ ದೊರಕುತ್ತದೆ. ಅದೇ ಪ್ರಾರಬ್ಧ; ಅಂದರೆ, ಆರಂಭಗೊಂಡಿರುವುದು. ಅದು ಇರುವಲ್ಲಿಯವರೆಗೆ ಅದರ ಪಕ್ವತೆಯನ್ನು ಅವಲಂಬಿಸಿ ಶರೀರಪ್ರಾಪ್ತಿ. ಮತ್ತು ಆ ಶರೀರದಲ್ಲಿ ಎಷ್ಟು ಕಾಲ ಜೀವಿಸಿರಬೇಕು, ಆ ಜೀವಿತ ಅವಧಿಯಲ್ಲಿ ಎಂತಹ ಭೋಗ (ಸುಖವೋ,ದುಃಖವೋ) ಅನುಭವಿಸಬೇಕು, ಇದೆಲ್ಲ ನಿರ್ಧರಿತವಾಗಿರುತ್ತದೆ' ಎಂದು ೨ನೇ ಪಾದದ ೧೨-೧೪ನೇ ಸೂತ್ರಗಳಲ್ಲಿ ಸುವಿಸ್ತಾರವಾಗಿ ಸುಸ್ಪಷ್ಟವಾಗಿ ತಿಳಿಸಿದ್ದಾರೆ.

ಆದುದರಿಂದ ಮುಂದಿನ ಶರೀರ ಪ್ರಾಣಿಯದಾದರೆ ಕ್ರೂರವೋ, ಸಾಧುವಿನದೋ, ಕ್ರೂರ ಪ್ರಾಣಿಗಳಲ್ಲಿ ಹುಲಿ, ಸಿಂಹ, ತೋಳ, ನರಿ.... ಇತ್ಯಾದಿಗಳಲ್ಲಿ ಯಾವುದು, ಸಾಧು ಪ್ರಾಣಿಯಾದರೆ ಹಸು, ಮೊಲ, ಜಿಂಕೆ... ಇತ್ಯಾದಿಗಳಲ್ಲಿ ಯಾವುದು? ಅಥವಾ ಗಿಡ ಬೆಟ್ಟ, ನದಿ, ಮುಳ್ಳು, ಕಸಕಡ್ಡಿಯ ಶರೀರವೋ ಅಥವಾ ಮನುಷ್ಯ ಶರೀರವೋ! ಈ ಯಾವುದೇ ವಿಧವಾದ ಶರೀರದಲ್ಲಿ ಎಷ್ಟು ಕಾಲ ವಾಸಿಸಬೇಕು, ಯಾವ ರೀತಿ (ಸುಖ-ದುಃಖ, ನೋವು-ನಲಿವು, ಭೋಗ-ಫಲ ಅನುಭವಿಸಬೇಕು, ಎಲ್ಲವಕ್ಕೂ ನಾವು ಮಾಡಿದ ಕರ್ಮವೇ (ಪುಣ್ಯದ್ದೋ, ಅಪುಣ್ಯದ್ದೋ) ಕಾರಣ.

## ಉತ್ಕೃಷ್ಟ ಕರ್ಮಫಲ

ಆದುದರಿಂದ ನಮಗೆ ಉತ್ತಮವಾದ ಶರೀರ, ಆ ಶರೀರದಲ್ಲಿ ಉತ್ಕೃಷ್ಟವಾದ ಭೋಗ ಎಲ್ಲಾ ಬೇಕು ಎನ್ನುವುದಾದರೆ ನಾವು ಮಾಡುವ ಹಾಗೂ ಮಾಡಿದ ಕೆಲಸಗಳೂ ಉತ್ಕೃಷ್ಟವಾಗಿರಬೇಕಾಗುತ್ತದೆ. ಒಂದು ಊರಿನಿಂದ ಒಂದು ಊರಿಗೆ ಹೋಗಬೇಕಾಗಿ ಬಂದರೆ ಎಷ್ಟೊಂದು ಸಿದ್ಧತೆ ಮಾಡಿಕೊಳ್ಳುತ್ತೇವೆ! ಕೇವಲ ಒಂದು ದಿನದ ಪ್ರಯಾಣವಾದರೂ ನಮ್ಮ ಸಿದ್ಧತೆ ಅಗಾಧವಾಗಿಯೇ ಇರುತ್ತದೆ. ಇನ್ನು ಕೆಲವು ದಿನಗಳ ಕಾಲದ ಸುದೀರ್ಘ ಪ್ರಯಾಣವಾದರೆ! ಆಹಾರ, ದೀಪ, ನೀರು, ಹಾಸಿಗೆ ... ಇತ್ಯಾದಿ ಏನೆಲ್ಲಾ ಸಿದ್ಧತೆಗಳ ಅಗತ್ಯ ಬರುತ್ತದೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯ ಕಷ್ಟಗಳಿಲ್ಲ. ಆದರೆ ಇವುಗಳ ವ್ಯವಸ್ಥೆ ಮಾಡಿಕೊಡುವವರ ವ್ಯವಸ್ಥೆ ಆಗಬೇಕು. ಅಥವಾ ಉಳಿದು

ಕೊಳ್ಳಲು ಯೋಗ್ಯವಾದ ವಸತಿಗೃಹ, ಅಲ್ಲಿ ಸಕಲ ಅನುಕೂಲ – ಈ ವ್ಯವಸ್ಥೆಯಾದರೂ ಆಗಬೇಕು. ಹಾಗೆ ಇರುವಾಗ ಈ ಶರೀರದಲ್ಲಿ ಜೀವಿಯ ಈ ಪ್ರಯಾಣ ಎಷ್ಟು ದಿನಗಳ ಕಾಲದ್ದು? ಮುಂದು ಮುಂದಿನ ನಿಲ್ದಾಣಗಳು ಯಾವುವು? ಅಲ್ಲಿನ ವಾಸ ಇತ್ಯಾದಿಗಳ ವ್ಯವಸ್ಥೆ ಏನು? ಶರೀರ ಬಿಟ್ಟ ಮೇಲೆ ಸೇರುವ ನಿಲ್ದಾಣ ಯಾವುದೋ, ಗೊತ್ತಿಲ್ಲ. ಅಲ್ಲಿ ಹೊಂದುವ ಅನುಕೂಲ ಗೊತ್ತಿಲ್ಲ. ಅದೆಲ್ಲಾ ಯೋಗ್ಯವಾದದ್ದು ಉತ್ಕೃಷ್ಟವಾದದ್ದು ಆಗಬೇಕಾದರೆ, ಅದೆಲ್ಲಾ ಈ ಪ್ರಾರಬ್ಧದಿಂದಲೇ ಆಗುವುದರಿಂದ ಇದನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು. ಭಾಗವತದಲ್ಲಿ ಹೇಳಿದೆ:

**ತತ್ತೇಽನುಕಂಪಾಂ ಸುಸಮೀಕ್ಷಮಾಣೋ**
**ಭುಂಜಾನ ಏವಾತ್ಮಕೃತಂ ವಿಪಾಕಮ್ ।**
**ಹೃದ್ವಾಗ್ವಪುರ್ಭಿರ್ವಿದಧನ್ನಮಸ್ತೇ**
**ಜೀವೇತ ಯೋ ಮುಕ್ತಿಪದೇ ಸ ದಾಯಭಾಕ್ ॥**

*(ಭಾಗವತ, ೧೦.೧೪.೮)*

'ಪ್ರಾರಬ್ಧಕ್ಕನುಗುಣವಾಗಿ ಬಂದಂತಹ, ಬರುವಂತಹ ಸುಖ–ದುಃಖ, ಮಾನಾಪಮಾನಾದಿ ಎಲ್ಲವನ್ನೂ ಭಗವಂತನ ಕೃಪೆ ಅನುಕಂಪೆ ಎಂದು ಭಾವಿಸುತ್ತಾ ಭಕ್ತಿಭಾವಪೂರ್ಣವಾಗಿ ಎಲ್ಲವನ್ನೂ ಭಗವಂತನ ಪಾದಗಳಿಗೆ ಅರ್ಪಿಸಿ ಅನುಭವಿಸುವವನು ತಂದೆಯ ಸಂಪತ್ತಿಗೆ ಮಗ ಉತ್ತರಾಧಿಕಾರಿಯಾಗುವಂತೆ ಭಗವಂತನ ಪರಮಪದಕ್ಕೆ ಅಧಿಕಾರಿ ಆಗುತ್ತಾನೆ' — ಈ ಮಾತು ಪ್ರಾರಬ್ಧವನ್ನು ಚೆನ್ನಾಗಿಟ್ಟುಕೊಳ್ಳುವ ಪರಿಯನ್ನು ತಿಳಿಸುತ್ತದೆ.

## ಭಗವನ್ನಾಮ ಸ್ಮರಣೆ

ಈ ರೀತಿ ಭಗವತ್ಕೃಪೆ ಭಗವದರ್ಪಣೆ ಈ ಎಲ್ಲದರ ಹಿನ್ನೆಲೆಯಲ್ಲಿರುವುದು ಭಗವನ್ನಾಮ ಸ್ಮರಣೆ. ಅದು ಒಂದಿದ್ದರೆ ತಪ, ಯಾಗ, ಯಜ್ಞ, ಆತ್ಮತತ್ತ್ವ ಮೀಮಾಂಸೆ, ಗುರುಕುಲವಾಸ ಇತ್ಯಾದಿ ಯಾವುದರ ಅಗತ್ಯವೂ ಬರುವುದಿಲ್ಲ. ತಮಿಳು ಆಚಾರ್ಯರ ಪರಂಪರೆಯ ಆಳ್ವಾರ್‌ಗಳ ಸಾಲಿನಲ್ಲಿ ಬರುವ ಶ್ರೀ ಕುಲಶೇಖರ ಆಳ್ವಾರರು ತಮ್ಮ 'ಮುಕುಂದ ಮಾಲಾ' ಸ್ತೋತ್ರದಲ್ಲಿ , ಭಗವಂತನ ಪಾದಾರವಿಂದಗಳ ಸ್ಮರಣೆಯಿಲ್ಲದೆ ಸಮರ್ಪಣಭಾವ ಇಲ್ಲದೆ ಮಾಡಿದ ವೇದಾದಿಗಳ ಅಭ್ಯಾಸ ಅರಣ್ಯರೋದನದಂತೆ, ಪ್ರತಿದಿನ ಆಚರಿಸುವ ವೇದವ್ರತಗಳು ಕೇವಲ ಬಲಿಗೇ ಸೀಮಿತವಾಗುವಂತೆ, ಪರಲೋಕದಲ್ಲಿ ಉತ್ತಮ ಭೋಗಗಳನ್ನು ಕರುಣಿಸುವ ಇಷ್ಟಾಪೂರ್ತ ಮೊದಲಾದ ಪುಣ್ಯಕರವಾದ ಯಾಗಗಳು ಬೂದಿಯಲ್ಲಿ ಹೋಮಮಾಡಿದಂತೆ, ಪವಿತ್ರತಮವಾದ ಕ್ಷೇತ್ರಗಳಲ್ಲಿ ಮಾಡಿದ ಪುಣ್ಯಸ್ನಾನಾದಿಗಳು ಆನೆಯ ಸ್ನಾನದಂತೆ ವ್ಯರ್ಥವೇ ಆಗುತ್ತದೆ — ಎಂದಿದ್ದಾರೆ.

ಆದುದರಿಂದ ಈ ಹುಟ್ಟು–ಸಾವುಗಳ ಚಕ್ರದಲ್ಲಿ ಸಿಲುಕಿ ಬೇರೆ ಬೇರೆ ಶರೀರಗಳನ್ನು ಪಡೆಯುತ್ತಾ ಇಲ್ಲಿ ಪಾಪ–ಪುಣ್ಯ ಮಾಡುತ್ತಾ ನಲುಗುತ್ತಿರುವ ಜೀವಿಗೆ ಈ ಬಾಧೆಯ ಬಿಡುಗಡೆಗೆ ಭಗವದ್ಭಕ್ತಿ, ಭಗವತ್ಕೃಪೆಯೇ ಅತ್ಯಂತ ಹಿತಕರವೂ ಸುಖಕರವೂ ಆದ ಉಪಾಯವಾಗಿದೆ. ನಾಮಸ್ಮರಣೆಗಿಂತ ಈ ಭವವನ್ನು ದಾಟಲು ಸುಲಭವಾದ ಬೇರೆ ಉಪಾಯ ಇಲ್ಲವೇ ಇಲ್ಲ– **'ನಾಮಸ್ಮರಣಾದನ್ಯೋಪಾಯಂ ನ ಹಿ ಪಶ್ಯಾಮೋ ಭವತರಣೇ'** – ಎಂದು ಅನುಭವಿಗಳು ಉದ್ಗರಿಸಿದ್ದಾರೆ. ಶ್ರೀ ರಾಮಕೃಷ್ಣರೂ 'ಭಗವನ್ನಾಮವನ್ನು ನಿನ್ನ ವಸ್ತ್ರದ ತುದಿಗೆ ಗಂಟು ಹಾಕಿಕೊಂಡು ಮಾಡುವ ಎಲ್ಲ ಕೆಲಸಗಳನ್ನೂ ಮಾಡು' ಎಂದಿದ್ದಾರೆ.

## ಸದಾಚಾರ

ನಾಮಸ್ಮರಣೆಯ ಮಹಿಮೆಯನ್ನು ತಮ್ಮ ಜೀವನಾನುಭವದಿಂದ ತಿಳಿದಿದ್ದ ಆರ್ಯಋಷಿಗಳು ನಮ್ಮ ಜೀವನವನ್ನು ಭಗವನ್ನಾಮಮಯವನ್ನಾಗಿ ಮಾಡಲು ಸದಾಚಾರ ನಿಯಮ ಹಾಕಿಕೊಟ್ಟಿದ್ದಾರೆ. 'ಸದಾಚಾರ'ದ ಮೂಲವೇ ಪರಮಾತ್ಮ ಸ್ಮರಣ, ಚಿಂತನ, ಧ್ಯಾನ, ದರ್ಶನ. ಅದು ಅನುಭವರೂಪದ್ದು. ಒಳಗೆ ಅಂತರಂಗದಲ್ಲಿ ಆದ ಆ ಪರಮಾತ್ಮನ ಐಕ್ಯಾನುಭೂತಿ ಸ್ಥಿತಿಯನ್ನು ಕಾಪಾಡಿಕೊಳ್ಳಲು, ಅದು ಅಚ್ಚಳಿಯದೆ ಉಳಿಯಲು 'ಸದಾಚಾರ'ದ ಅಗತ್ಯವಿದೆ. **'ಯತ್ರಯತ್ರ ಮನೋ ಯಾತಿ ತತ್ರ ತತ್ರ ಸಮಾಧಿ ಸ್ಥಿತಿಃ'** ಎನ್ನುವಂತಹ ಸ್ಥಿತಿಯನ್ನು ಅನುಭವಿಸುತ್ತಿದ್ದರೂ ಆಚಾರವನ್ನು ಬಿಡಬಾರದು. ಲೋಕಸಂಗ್ರಹಕ್ಕಾಗಿಯಾದರೂ ಆಚಾರ ಮಾಡಲೇಬೇಕು ಎಂದು ಶ್ರುತಿ, ಸ್ಮೃತಿಗಳು ವಿಧಿಸಿವೆ. ಆದುದರಿಂದ ಈ ಸದಾಚಾರಾತ್ಮಕ ಕರ್ಮ, ಚಿತ್ತಶುದ್ಧಿಯ ನೈರಂತರ್ಯಕ್ಕೆ. ಹಾಗಾಗಿ ಶ್ರೀಶಂಕರರು ತಮ್ಮ 'ಸದಾಚಾರಃ' ಎಂಬ ಕೃತಿಯಲ್ಲಿ ಜೀವಿಯು ಅನುಸರಿಸಬೇಕಾದ ಹನ್ನೆರಡು ಅಂಶಗಳನ್ನು 'ಸದಾಚಾರ'ಗಳೆಂದು ಪಟ್ಟಿಮಾಡಿದ್ದಾರೆ. ಅದರಲ್ಲಿ ಮೊದಲನೆಯದೇ 'ಪ್ರಾತಃಸ್ಮರಣ'.

**ಬ್ರಾಹ್ಮೀ ಮುಹೂರ್ತೇ ಚೋತ್ಥಾಯ ಚಿಂತಯೇದಾತ್ಮನೋಹಿತಮ್ ।**
**ಸ್ಮರಣಂ ವಾಸುದೇವಸ್ಯ ಕುರ್ಯಾತ್ ಕಲಿಮಲಾಪಹಮ್ ॥**

'ಬ್ರಾಹ್ಮೀ ಮುಹೂರ್ತದಲ್ಲಿ ಏಳಬೇಕು, ಆತ್ಮಹಿತಚಿಂತನೆಯನ್ನು ಮಾಡಬೇಕು. ಭಗವಂತನ ಸ್ಮರಣೆಯನ್ನು ಮಾಡಬೇಕು. ಅದು ಕಲಿಯ ಎಲ್ಲಾ ದೋಷಗಳನ್ನೂ ದೂರಮಾಡುವುದು' – ಎಂದೂ, 'ಬೆಳಗ್ಗೆ ಎದ್ದಾಗಿನಿಂದ ರಾತ್ರಿ ಮಲಗುವವರೆಗೆ ತತ್ತ್ವಚಿಂತನೆಯಲ್ಲಿ ಕಾಲ ಕಳೆಯಬೇಕು–ಎಂದೂ, **'ಪ್ರಾತರ್ನಿಶಿ ಸಂಸ್ಮರನ್ ನಾರಾಯಣಮವಾಪ್ನೋತಿ'**– ಹಗಲು ರಾತ್ರಿ ಭಗವಂತನನ್ನು ಸ್ಮರಿಸುವುದರಿಂದ ಭಗವಂತನನ್ನು ಹೊಂದುತ್ತಾರೆ– ಎಂದೂ ಇದೇ ಮೊದಲಾಗಿ ಧರ್ಮಸೂತ್ರಗಳೂ, ಸ್ಮೃತಿಗಳೂ, ಪುರಾಣಗ್ರಂಥಗಳೂ ತಿಳಿಸುತ್ತವೆ.

## ಪ್ರಾತಃಸ್ಮರಣ

ಈ ಹಿನ್ನೆಲೆಯಲ್ಲೇ ಬೆಳಗಿನ ಉದಯರಾಗದಿಂದ ಪರಮಾತ್ಮನನ್ನು ಎಬ್ಬಿಸುವ ಹಾಡುಗಳನ್ನು ಹೇಳುತ್ತಾ, ತಮ್ಮ ದಿನದ ವಿವಿಧ

ಎಲ್ಲಾ ಕೆಲಸಗಳಲ್ಲೂ ಪರಮಾತ್ಮ ಸಂಬಂಧ ವಿಚಾರಗಳನ್ನು ನೆನಪಿಗೆ ತರುವ ಪದಗಳನ್ನು ಹಾಡುತ್ತಾ ದಿನ ಕಳೆಯುತ್ತಿದ್ದುದು, ಒಂದು ಕಾಲಕ್ಕೆ ಮನೆ ಮನೆಗಳಲ್ಲಿನ ಸಾಧಾರಣ ದೃಶ್ಯವಾಗಿತ್ತು. ಈ ಪ್ರಾತಃಸ್ಮರಣೆಗಾಗಿಯೇ ಶ್ರೀರಾಮ, ವಿನಾಯಕ, ಶಿವ, ಸೂರ್ಯ, ಗುರು ಮೊದಲಾದ ಎಲ್ಲ ದೇವತೆಗಳಿಗೆ ಸಂಬಂಧಿಸಿದ ಪ್ರಾತಃಸ್ಮರಣ ಸ್ತೋತ್ರಗಳು ರಚಿತವಾಗಿವೆ. ಇವುಗಳಲ್ಲಿ ಆಯಾ ದೇವತೆಯ ಸ್ವರೂಪಸ್ಮರಣೆ, ಮುಖ, ಕರ, ಪಾದ ಇತ್ಯಾದಿ ಅವ ಯವಗಳ ಆಶ್ರಯ ಭಜನೆ, ನಮನ ಇತ್ಯಾದಿ ಇರುತ್ತದೆ. ಇವು ಗಳಿಂದ ಮಾನವನಿಗೆ ದೊರಕುವ ಇಷ್ಟಾರ್ಥಪ್ರಾಪ್ತಿ, ಭವಸಾಗರ ದಾಟುವಿಕೆ ಮೊದಲಾದ ಲೌಕಿಕ ಪಾರಲೌಕಿಕ ಪ್ರಯೋಜನ ಗಳನ್ನೂ ಅವು ತಿಳಿಸುತ್ತವೆ. ಇದರ ನಿತ್ಯಾನುಸಂಧಾನದಿಂದ ಮಾನವನ ಚಿತ್ತ, ಮನ, ಬುದ್ಧಿಗಳಲ್ಲಿ ತನ್ನ ಇಷ್ಟದೇವತಾ ಮೂರ್ತಿ ಸುಸ್ಥಿರವಾಗಿ ನೆಲೆಸುವುದಕ್ಕೆ ಸಾಧ್ಯವಾಗುತ್ತದೆ. ಇದರಿಂದ ಕ್ರಮೇಣ ಅವನಿಗೆ ಆ ದೇವತೆಯ ವಿಷಯದಲ್ಲಿ ಪ್ರೀತಿ ಹುಟ್ಟಿ ಅದು ಭಕ್ತಿ ಯಾಗಿ, ಮುಖ್ಯಭಕ್ತಿಯಾಗಿ ಕೊನೆಗೆ ಪರಾಭಕ್ತಿಯಾಗಿ ಪರಿಣಮಿ ಸುತ್ತದೆ. ಪರತತ್ತ್ವದ ಈ ರೀತಿಯ ಸಾಕಾರ ಕಲ್ಪನೆ ಮಾನವನ ಉಪಾಸನೆಯ ಸೌಕರ್ಯಕ್ಕೆ ಮಾತ್ರ; **'ಉಪಾಸಕಾನಾಂ ಕಾರ್ಯಾರ್ಥಂ ಬ್ರಹ್ಮಣೋ ರೂಪಕಲ್ಪನಾ'**. ಆದುದರಿಂದ ಈ ರೂಪಸಹಿತವಾದುದನ್ನು 'ಉಪಾಸ್ಯಬ್ರಹ್ಮ' ಎಂದೂ ನಿರ್ಗುಣ, ನಿರಾಕಾರ, ನಿರವಯವ, ನಿಷ್ಪ್ರಪಂಚ, ನಿರ್ವಿಕಲ್ಪ 'ಬ್ರಹ್ಮ'ವನ್ನು 'ಜ್ಞೇಯಬ್ರಹ್ಮ' ಎಂದೂ ಶಾಸ್ತ್ರಗಳು ನಿರ್ದೇಶಿಸುತ್ತವೆ. ಸಾಕಾರ ನಿರಾಕಾರ ಎರಡೂ ಒಂದೇ ನಾಣ್ಯದ ಎರಡು ಮುಖಗಳಂತೆ. ಎರಡೂ ಪರಮ ಸತ್ಯವೇ.

ಇಲ್ಲಿ ಪ್ರಾತಃಸ್ಮರಣಸ್ತೋತ್ರಗಳಲ್ಲಿ ಪ್ರಸಿದ್ಧವಾದ ನಿರ್ಗುಣ ಬ್ರಹ್ಮದ ಸ್ತೋತ್ರದ ಅರ್ಥಾನುಸಂಧಾನವನ್ನು ಸ್ವಲ್ಪಮಟ್ಟಿಗೆ ಮಾಡಿ ಕೊಳ್ಳುವ ಪ್ರಯತ್ನಮಾಡೋಣ.

ಇದು ಕೇವಲ ಮೂರು ಶ್ಲೋಕಗಳುಳ್ಳದ್ದು:

**ಪ್ರಾತಃ ಸ್ಮರಾಮಿ ಹೃದಿ ಸಂಸ್ಫುರದಾತ್ಮತತ್ತ್ವಂ**
**ಸಚ್ಚಿತ್ಸುಖಂ ಪರಮಹಂಸಗತಿಂ ತುರೀಯಮ್ ।**
**ಯಃ ಸ್ವಪ್ನಜಾಗರ ಸುಷುಪ್ತಮವೈತಿ ನಿತ್ಯಂ**
**ತದ್ಬ್ರಹ್ಮ ನಿಷ್ಕಲಮಹಂ ನ ಚ ಭೂತಸಂಘಃ ॥ ೧ ॥**

ನಮ್ಮ ಒಳಗೆ ಹೃದಯ ಭಾಗದಲ್ಲಿ ನೆಲೆಸಿದೆ ಎಂದು ಜ್ಞಾನಿ ಗಳು ತಮ್ಮ ಅನುಭೂತಿಯಿಂದ ಕಂಡುಕೊಂಡ 'ಆತ್ಮ' ತತ್ತ್ವ ಸ್ವರೂಪದ ವಿಶ್ಲೇಷಣೆ ಇಲ್ಲಿದೆ. ಈ ಆತ್ಮದ ಸ್ಥಿತಿ ಹೊರಮುಖಕ್ಕೆ 'ಹಂ' ಎಂದು ಹೋಗುವ ಪ್ರಾಣ ಮತ್ತು 'ಸಃ' ಎಂದು ಒಳಗೆ ಪ್ರವೇಶಿಸಿ ಶರೀರದ ಎಲ್ಲಾ ಭಾಗಕ್ಕೆ ಅಮೃತವನ್ನೂ, ಶಕ್ತಿಯನ್ನೂ, ಪುಷ್ಟಿ, ಓಜ, ಸಹ, ಭ್ರಾಜ ಇತ್ಯಾದಿ ಎಲ್ಲವನ್ನೂ ತಲುಪಿಸುವ ಅಪಾನವನ್ನು ಆಶ್ರಯಗೊಂಡಿದೆ. ಇದು ನಿರಂತರ ಇರುವಿಕೆ ಯನ್ನು ಹೊಂದಿದೆ. ಅದು ಎಂದೂ ಅಳಿಸಿ ಹೋಗುವುದಿಲ್ಲ. ಇದರ ಸ್ವಭಾವ ಅರಿವು, ತಿಳಿವಳಿಕೆ ಹಾಗೂ ಸುಖ-ಆನಂದ. ಈ 'ಚೈತನ್ಯ'ದ ಇರುವಿಕೆಯಿಂದ ಜೀವವು ಎಚ್ಚರಿಕೆಯ ಸ್ಥಿತಿಯ ಎಲ್ಲಾ ಅನುಭವವನ್ನು, ಸ್ವಪ್ನದಲ್ಲಿ ಹೊಂದುವ ಎಲ್ಲಾ ಭೋಗಾದಿ ಗಳನ್ನು, ಗಾಢನಿದ್ರಾಸ್ಥಿತಿಯಲ್ಲಿ ಏನೂ ಇಲ್ಲದ ಎಲ್ಲವನ್ನೂ ಮರೆತ ಪರಮಾನಂದದ ಸ್ಥಿತಿಯನ್ನೂ ಅನುಭವಿಸುತ್ತದೆ. ಆದುದರಿಂದ ಇದು ಪೃಥಿವೀ, ಜಲ, ಅಗ್ನಿ, ವಾಯು, ಆಕಾಶಗಳ ಸಂಯೋ ಜನೆಯಿಂದ ನಿರ್ಮಿತವಾದುದಲ್ಲ. ಆ ಕಾರಣದಿಂದಲೇ ಇದಕ್ಕೆ ಯಾವುದೇ ಅವಯವಗಳಿಲ್ಲ. ಸತ್ವ, ರಜಸ್ಸು, ತಮಸ್ಸುಗಳಿಗೂ ಸೇರಿದ್ದಲ್ಲ. ಇಂತಹ 'ಆತ್ಮ ತತ್ತ್ವ'ವನ್ನು ಕುರಿತು ಬೆಳಿಗ್ಗೆ ಎದ್ದು ಅನುಸಂಧಾನ ಮಾಡುತ್ತೇನೆ.

**ಪ್ರಾತರ್ಭಜಾಮಿ ಮನಸಾ ವಚಸಾಮಗಮ್ಯಂ**
**ವಾಚೋ ವಿಭಾಂತಿ ನಿಖಿಲಾ ಯದನುಗ್ರಹೇಣ ।**
**ಯಂ ನೇತಿ ನೇತಿ ವಚನೈರ್ನಿಗಮಾ ಅವೋಚು-**
**ಸ್ತಂ ದೇವದೇವಮಜಮಚ್ಯುತಮಾಹುರಗ್ರ್ಯಮ್ ॥ ೨ ॥**

ಲೋಕದಲ್ಲಿರುವ ಎಲ್ಲಾ ಚರಾಚರ ಜೀವಿಗಳ ಮಾತುಗಳು ಈ 'ಆತ್ಮಚೈತನ್ಯ'ದ ಬಲದಿಂದಲೇ ಹುಟ್ಟುತ್ತವೆ. ಆದರೆ ಈ ಯಾವ ಮಾತೂ ಅದರ ಸ್ವರೂಪವನ್ನು - ಇದು ಹೀಗೇ ಇರು ವುದು, ಇದು ಇಂತಹುದೇ ಎಂದು ನಿರ್ದೇಶಿಸಿ ಸುಸ್ಪಷ್ಟವಾಗಿ ತಿಳಿಸಲಾರವು. ಇದು 'ದೇವ' ಎನ್ನಿಸಿಕೊಳ್ಳುವ ಲೋಕಾಧಿಪತಿ ದಿಕ್ಪತಿಗಳೂ ಆದ, ಸೃಷ್ಟಿ ಸ್ಥಿತಿ ಲಯಾದಿಗಳನ್ನು ಮಾಡುವವರೂ ಆದ, ಎಲ್ಲರಿಗೂ ಒಳ ಹೊರ ತೇಜಸ್ಸು, ಕಾಂತಿ, ಬಲಗಳನ್ನು ಕೊಡುವ 'ದೇವ'ವಾಗಿದೆ. ಇದಕ್ಕೆ ಜನ್ಮವೆಂಬುದು ಇಲ್ಲ. ಆದು ದರಿಂದಲೇ ಇದು ತನ್ನ ಸ್ವಸ್ವರೂಪದಿಂದ ತನ್ನ ಮೂಲ ನೆಲೆ ಯಿಂದ ಎಂದೆಂದಿಗೂ ಜಾರುವುದಿಲ್ಲ. ಇದರಿಂದ ಮುಂದಕ್ಕೆ ಎಲ್ಲವೂ ವಿಕಾಸಗೊಂಡಿವೆ. ಆದುದರಿಂದ ಇದು ಅಗ್ರ್ಯ=ಮೊಟ್ಟ ಮೊದಲನೆಯದು. ವೇದಗಳು ಇದನ್ನು ಕೈಯೆ? ಕಾಲೆ? ಅಲ್ಲ, 'ಇದಲ್ಲ ಇದಲ್ಲ' ಎಂಬ ರೂಪದಲ್ಲಿ ನಿರ್ದೇಶಿಸುತ್ತವೆ. ಇಂತಹ ತತ್ತ್ವವನ್ನು ಮನಸ್ಸಿನಿಂದ ಆಶ್ರಯಿಸುತ್ತೇನೆ.

**ಪ್ರಾತರ್ನಮಾಮಿ ತಮಸಃ ಪರಮರ್ಕವರ್ಣಂ**
**ಪೂರ್ಣಂ ಸನಾತನಪದಂ ಪುರುಷೋತ್ತಮಾಖ್ಯಮ್ ।**
**ಯಸ್ಮಿನ್ನಿದಂ ಜಗದಶೇಷಮಶೇಷ ಮೂರ್ತೌ**
**ರಜ್ಜ್ವಾಂ ಭುಜಂಗಮ ಇವ ಪ್ರತಿಭಾಸಿತಂ ವೈ ॥ ೩ ॥**

ಈ ಪರತತ್ತ್ವಕ್ಕೆ ಬೆಳಗೆದ್ದು ನಮಸ್ಕರಿಸುತ್ತೇನೆ. ಇದು ಸೂರ್ಯ ನಂತೆ ಪ್ರಕಾಶಮಾನವಾಗಿದೆ. ಅಜ್ಞಾನ, ಮಾಯೆ, ಮೋಹ ಮೊದ ಲಾದ ಎಲ್ಲಾ ಕತ್ತಲೆಗಳನ್ನು ದಾಟಿ ಸಾಗಿದಾಗ ಗೋಚರಕ್ಕೆ ಬರು ತ್ತದೆ. ಇದು ಯಾವಾಗಲೂ ಪೂರ್ಣವಾಗಿಯೇ ಇರುತ್ತದೆ. ಇದರ ನೆಲೆ ಶಾಶ್ವತವಾದುದು. ಇದಕ್ಕೆ 'ಪುರುಷೋತ್ತಮ' ಎಂದು ಹೆಸರು. ಇದರೊಳಗೆ ಸಮಸ್ತ ವಿಶ್ವಾಂಡ, ಬ್ರಹ್ಮಾಂಡಗಳು ತಮ್ಮೊಳ ಗಿನ ಎಲ್ಲಾ ಜೀವಿಗಳೊಡಗೂಡಿ 'ಹಗ್ಗದಲ್ಲಿ ಹಾವು' ಕಂಡಂತೆ ಭಾಸವಾಗುತ್ತದೆ.

ಈ ಪರಿಪೂರ್ಣ, ಸದಾ ಸರ್ವದಾ ಅಸ್ತಿತ್ವದಲ್ಲಿರುವ ತತ್ತ್ವವು ಸೃಷ್ಟಿಯಾಗಿರುವ ಎಲ್ಲಾ ಅಣುಅಣುವಿನಲ್ಲೂ ಮಹತ್ತಿನಲ್ಲೂ ಮಹತ್ತಿಗೂ ಮಹತ್ತಾದುದರಲ್ಲೂ ಮೇಲೆ-ಕೆಳಗೆ, ಒಳಗೆ-ಹೊರಗೆ, ಆಚೆ-ಈಚೆ — ಎಲ್ಲೆಲ್ಲೂ ತುಂಬಿಕೊಂಡಿದೆ. ಅದರಿಂದ ಹುಟ್ಟಿ, ಅದರಲ್ಲೇ ಲೀನವಾಗುತ್ತದೆ. ಇದನ್ನು ಮನದಟ್ಟು ಮಾಡಿ ಕೊಡಲು ಹಾವು-ಹಗ್ಗದ ಉದಾಹರಣೆಯನ್ನು ಕೊಟ್ಟಿದ್ದಾರೆ.

ಸೊಟ್ಟಸೊಟ್ಟಗೆ ಬಿದ್ದಿರುವ ಹಗ್ಗ ಒಂದನ್ನು ಕಂಡು ಒಬ್ಬ ಕಿಟ್ಟನೆ ಜೋರಾಗಿ ಚೀರಿ, 'ಹಾವು-ಹಾವು' ಎಂದು ಬೊಬ್ಬೆ ಇಡುತ್ತಾನೆ. ಸುತ್ತಲಿನವರು ದೀಪ, ಹಗ್ಗ, ದೊಂದಿ, ಕೋಲು ಎಲ್ಲಾ ಹಿಡಿದು ಓಡಿಬರುತ್ತಾರೆ. ಇವನು ಗಡಗಡ ನಡುಗುತ್ತಾ ಚಲಿಸಲೂ ಆಗದೆ ಒದ್ದಾಡುತ್ತಿದ್ದಾನೆ. ಅವನು ತೋರಿಸಿದುದರ ಮೇಲೆ ಮೊದಲು ದೀಪದ ಬೆಳಕು ಬಿಡುತ್ತಾರೆ, ಆಮೇಲೆ ಕೋಲಿನಿಂದ ತಗುಲಿಸಿ ಚುಚ್ಚಿನೋಡುತ್ತಾರೆ. ಅದರಲ್ಲಿ ಯಾವ ಚಲನ-ವಲನಗಳು ಕಂಡು ಬರುವುದಿಲ್ಲ. ಆಗ ಎಲ್ಲರಿಗೂ ಸ್ಪಷ್ಟವಾಗುತ್ತದೆ, ಅದು ಹಾವು ಅಲ್ಲ, ಹಗ್ಗ ಎಂದು. ಅದರಿಂದ ಉಂಟಾಗಿದ್ದ ಭಯಂಕರ ಭಯ...ಇತ್ಯಾದಿಗಳನ್ನು ಅವರು ನೆನೆದು, ಬಿದ್ದು ಬಿದ್ದು ನಗುತ್ತಾರೆ. 'ಹಾವು' ಎಂದು ವ್ಯಕ್ತಿ ಕೂಗಿಕೊಂಡಾಗ ಇದ್ದದ್ದೂ 'ಹಗ್ಗ' ಮಾತ್ರವೇ, ದೀಪ, ದೊಂದಿ, ಇತ್ಯಾದಿಗಳಿಂದ ನಾನಾ ರೀತಿ ಪರೀಕ್ಷೆ ಮಾಡಿದಾಗ ಇದ್ದುದೂ ಹಗ್ಗ ಮಾತ್ರವೇ. ಆದರೆ ಮಧ್ಯದ ಸ್ವಲ್ಪ ಕಾಲದಲ್ಲಿ ಅದು 'ಹಾವು' ಎಂಬುದಾಗಿ ಕಂಡು ಒಬ್ಬೊಬ್ಬನ ಮನಸ್ಸಿನಲ್ಲಿ ವಿವಿಧ ಭಾವನೆಗಳನ್ನು ಉಂಟುಮಾಡಿತು. ಒಬ್ಬ ವೀರನಿಗೆ ಅದನ್ನು ಸದೆಬಡಿದು ಲೋಕೋಪಕಾರ ಮಾಡುವೆನೆಂಬ ಹೆಮ್ಮೆಯ ಭಾವನೆ, ಪ್ರಾಣಿದಯೆ ಉಳ್ಳ ಒಬ್ಬನಿಗೆ ಅದನ್ನು ಉಪಾಯದಿಂದ ಹಿಡಿದು ಕಾಡಿನಲ್ಲಿ ಬಿಟ್ಟು ಬಂದು 'ಕರುಣಾಮಯಿ' ಎನ್ನಿಸಿಕೊಳ್ಳುವ ಭಾವನೆ, ಕಿರುಚಿ ಬೊಬ್ಬಿಟ್ಟವನಿಗೆ ಜೀವನದ ನಶ್ವರತೆ, ಎಲ್ಲಾ ದೇವನ ಸೃಷ್ಟಿ ಇತ್ಯಾದಿ ತಾತ್ತ್ವಿಕ ಭಾವನೆ. ಹೀಗೆ 'ಹಾವು' ಎಂಬ ಜ್ಞಾನ ಹತ್ತು ಹಲವರಿಗೆ ಹಲವು ವಿಧವಾದ ಭಾವಗಳಿಗೆ ಅವಕಾಶ ಮಾಡಿ ಕೊಟ್ಟಿರುತ್ತದೆ. ಆದರೆ ನಿಜವನ್ನು ತಿಳಿದ ಮೇಲೆ ಎಲ್ಲರ ಭಾವನೆಗಳೂ ಜರ್ರನೆ ಅಳಿಸಿಹೋಗುತ್ತವೆ.

ಹಾಗೆಯೇ ಮೊದಲೂ, ಆಮೇಲೂ ಇರುವುದು 'ಪರಮಾತ್ಮ' ಮಾತ್ರವೇ. ಆದರೆ ಮಧ್ಯದಲ್ಲಿ ಉಂಟಾಗುವ ನಾನಾ ವಿಧ ಭಾವ, ರಸ, ಬಂಧ, ಇವೆಲ್ಲಾ ಲೀಲಾಮಾತ್ರ. ವಿಶ್ವವಾಗಿ ವಿಕಾಸಗೊಂಡು ಹಲವಾರು ಅನುಭವಾದಿಗಳಿಗೆ ಕಾರಣವಾದಂತೆ ಭಾಸವಾಗುವುದು ಸ್ವಲ್ಪಕಾಲ ಮಾತ್ರ. ಜ್ಞಾನ ಬುದ್ಧಿ ಅನುಭವಗಳಿಗೆ ನಿಲುಕದಂತಹ, ಈ ವಿಚಿತ್ರ, ವಿಶಿಷ್ಟ ಪವಾಡ ಸದೃಶವಾದ ಲೀಲೆ ನಡೆಸುವ ಆ ಪರತತ್ತ್ವಕ್ಕೆ ನಾವು ಶರಣಾಗಿ ನಮಿಸಬೇಕು, ಅಷ್ಟೆ. ಈ ರೀತಿಯ ಶರಣಾಗತ ಭಾವವೇ ಅದನ್ನು ಅರಿಯಲು ಇರುವ ಪರಮ ಸಾಧನ. ಗೀತಾಚಾರ್ಯನ ಹೇಳಿಕೆ, **'ಮಾಮೇವ ಯೇ ಪ್ರಪದ್ಯಂತೇ ಮಾಯಾಮೇತಾಂ ತರಂತಿ ತೇ'** ಇದನ್ನು ದೃಢಪಡಿಸುತ್ತದೆ.

ದ್ವಾರಕಾವಾಸಿಯಾದ ಶ್ರುತದೇವ ಎಂಬ ಒಬ್ಬನು ಶ್ರೀಕೃಷ್ಣನನ್ನು ತನ್ನ ಮನೆಗೆ ಆಹ್ವಾನಿಸುತ್ತಿದ್ದ. ಶ್ರೀಕೃಷ್ಣನು ಅವನ ಮನೆಗೆ ಹೋದಾಗ ಅವನಿಗಾದ ಆನಂದಕ್ಕೆ ಎಣೆಯೇ ಇರಲಿಲ್ಲ. ತಾನು ಉಟ್ಟ ಬಟ್ಟೆಯನ್ನೇ ಅವನು ಹಾರಿಸುತ್ತ, ಸುತ್ತಿ ಸುತ್ತಿ ಉನ್ಮತ್ತನಂತೆ ಕುಣಿಯುತ್ತಿದ್ದ. ಅದೂ ಅಲ್ಲದೆ,

**ನಾದ್ಯ ನೋ ದರ್ಶನಂ ಪ್ರಾಪ್ತಃ ಪರಂ ಪರಮಪೂರುಷಃ ।**
**ಯರ್ಹೀದಂ ಶಕ್ತಿಭಿಃ ಸೃಷ್ಟ್ವಾ ಪ್ರವಿಷ್ಟೋ ಹ್ಯಾತ್ಮಸತ್ತಯಾ ॥**

*(ಭಾಗವತ, ೧೦.೮೬.೪೪)*

– ಎಂದು ಪರಮಾತ್ಮನನ್ನು ಕುರಿತು ಸ್ತೋತ್ರ ಮಾಡುತ್ತಾನೆ. 'ದೇವರೇ, ನೀನು ಇವತ್ತೇ, ಈಗಲೇ ನಮಗೆ ನಿನ್ನ ದರ್ಶನ ಕೊಡುತ್ತಿರುವುದಲ್ಲ. ಎಂದು ನೀನು ನಿನ್ನ ಶಕ್ತಿಗಳಿಂದ ಈ ಸೃಷ್ಟಿಯ ಕೆಲಸವನ್ನು ಆರಂಭ ಮಾಡಿ, ಈ ಎಲ್ಲವನ್ನೂ ಪ್ರವೇಶಿಸಿದೆಯೋ, ಆಗಲೇ ನೀನು ನಮಗೆ ನಿನ್ನ ದರ್ಶನಭಾಗ್ಯವನ್ನು ಕರುಣಿಸಿದೆ' ಎನ್ನುತ್ತಾನೆ.

ಅಂದರೆ, ವಿಶ್ವಾಂಡ, ಬ್ರಹ್ಮಾಂಡವಾಗಿ ಏನೇನು ಸೃಷ್ಟಿಸಲ್ಪಟ್ಟಿದೆಯೋ ಅದರ ಅಣು ಅಣುವಿನಲ್ಲೂ ಪರಮಾತ್ಮನಿದ್ದಾನೆ. ಆದರೆ ಇದನ್ನು ಕಾಣಲು, ಅನುಭವಿಸಲು ನಮಗೆ ದೃಷ್ಟಿ ಬೇಕಲ್ಲ! ಇಲ್ಲಿ ಎಲ್ಲವೂ ಪರಮಾತ್ಮನೇ ಎಂಬ ತನ್ನ ಅನುಭವವನ್ನು ಶ್ರುತದೇವನು ವ್ಯಕ್ತಪಡಿಸುತ್ತಾನೆ.

### ಉಪಸಂಹಾರ

ಒಟ್ಟಿನಲ್ಲಿ ಯಾವುದನ್ನೇ ಆದರೂ ಆಶ್ರಯಿಸಿ ಮನುಷ್ಯನು ದೇವರ ಸ್ಮರಣೆಯಿಂದ ತನ್ನ ದಿನವನ್ನು ಆರಂಭಿಸಬೇಕೆಂಬುದು ನಮ್ಮ ಸಂಸ್ಕೃತಿ, ನಮ್ಮ ಕುಲಾಚಾರ ಪದ್ಧತಿ. ಈ ರೀತಿಯ ಭಗವಂತನ ಸ್ಮರಣೆಯನ್ನು ನಿರಂತರ ಮಾಡುವುದರಿಂದ ಆಯಾ ದಿನದ ಬದುಕು ಕ್ಲೇಶ ಕಷ್ಟಕಾರ್ಪಣ್ಯಗಳಿಲ್ಲದೆ ಹಾಯಾಗಿ ಅನುಭವಸಿದಂತಾಗುವುದು. ಅಷ್ಟೇ ಅಲ್ಲದೆ, ಇದೆಲ್ಲವೂ ಭಗವಂತನ ಕರುಣೆಯಿಂದ ದೊರೆತುದು, ಇದೆಲ್ಲವೂ ಆ ಪರತತ್ವದ್ದೇ. ಭಗವತ್ಕೃಪೆಯಿಂದ ದೊರೆತುದು ಭಗವದರ್ಪಿತವಾದಾಗ ಸಾರ್ಥಕವಾಗುವುದು ಎಂಬ ಭಾವ ಮನುಷ್ಯರಲ್ಲಿ ಮೊಳೆತು, ಅದರಲ್ಲಿ ಸುದೃಢವಾಗಿ ಬೇರು ಬಿಟ್ಟಿರುವ ನಾನು-ನನ್ನದೆಂಬ ಭಾವ ದೂರವಾಗಿ, ಅವನು ನೆಮ್ಮದಿಯ ಸುಖ, ಶಾಂತಿ, ಸುಭದ್ರ ಜೀವನ ನಡೆಸುವಂತೆ ಆಗುವುದು. ಇಂತಹ ಸುಮಹತ್ವದಾಯಕ ಮಹಿಮೆ ಉಳ್ಳವು ಪ್ರಾತಃಸ್ಮರಣ ಸ್ತೋತ್ರಗಳು. ಅದಕ್ಕಾಗಿಯೇ ಜ್ಞಾನಿಗಳು ಇವನ್ನು 'ಸದಾಚಾರ'ದಲ್ಲಿ ಸೇರಿಸಿ 'ಸತ್ಸಂಪ್ರದಾಯ'ವಾಗಿ ಲೋಕಕ್ಕೆ ಕರುಣಿಸಿದ್ದಾರೆ. ✿